ಬುಧವಾರ 25.02.2026
ಬೆಂಗಳೂರು, ಬೆಲೆ: 5ರೂ.2 ಪುಟಗಳು
ಸಂಪುಟ 01 – ಸಂಚಿಕೆ 153

Digital Varthe Kannada Daily
Volume 01 - Issue 153
Wednesday 24.02.2026
Price: 5/- Rs
2 Pages Bangalore

PRGI/RNI: KNKAN/25/A1348

# ಡಿಜಿಟಲ್ ವಾರ್ತೆ

ಕನ್ನಡ ದಿನಪತ್ರಿಕೆ
ಕನ್ನಡಿಗರ ಶಕ್ತಿ

DIGITAL VARTHE
digitalvarthe@gmail.com
www.digitalvarthe.com

# ನೆಲಮಂಗಲ ನಗರಸಭೆಯ 7 ಸದಸ್ಯರು ಅನರ್ಹ: ಪಕ್ಷಾಂತರ ನಿಷೇಧ ಕಾಯ್ದೆಯಡಿ ಜಿಲ್ಲಾಧಿಕಾರಿ ಆದೇಶ

## ಕಾನೂನು ಹೋರಾಟಕ್ಕೆ ಸಂದ ಜಯ । ಅಡ್ಡ ಮತದಾನ ಮಾಡಿದವರಿಗೆ ಚುರುಕು । ಸುದೀರ್ಘ ವಾದ ವಿವಾದ ಸುಖಾಂತ್ಯ । ರಾಜಕೀಯ ತಲ್ಲಣ!?

**ನೆಲಮಂಗಲ:** ಕರ್ನಾಟಕ ಸ್ಥಳೀಯ ಸಂಸ್ಥೆಗಳ ಪಕ್ಷಾಂತರ ನಿಷೇಧ ಕಾಯ್ದೆ ಅಧಿನಿಯಮ 1987ರ ಕಲಂ 4(2)(ııı) ಅನ್ವಯ ನೆಲಮಂಗಲ ನಗರಸಭೆಯ ಏಳು ಸದಸ್ಯರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅನರ್ಹಗೊಳಿಸಿ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಎ.ಬಿ. ಬಸವರಾಜು ಆದೇಶ ಹೊರಡಿಸಿದ್ದಾರೆ. ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಯಲ್ಲಿ ಪಕ್ಷದ ವಿಪ್ ಉಲ್ಲಂಘಿಸಿ ಕ್ರಾಸ್ ಮತದಾನ ಮಾಡಿದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

### ಅಧ್ಯಕ್ಷರ ಕುರ್ಚಿ ಭದ್ರಗೊಳಿಸಿ, ತಮ್ಮ ಏಣಿಯನ್ನ ಒದ್ದುಕೊಂಡ ಸದಸ್ಯರು

ಅನರ್ಹಗೊಂಡ ಸದಸ್ಯರಾಗಿ ಆನಂದ್ (ಪ್ರಸ್ತುತ ಉಪಾಧ್ಯಕ್ಷರು), ಶಾರದಾ ಉಮೇಶ್, ದಕ್ಷಾಯಣಿ ರವಿಕುಮಾರ್, ಬಿ. ಪದ್ಮನಾಭ್ (ಪ್ರಸ್ತುತ ಸ್ಥಾಯಿ ಸಮಿತಿ ಸದಸ್ಯರು), ಭಾರತಿಬಾಯಿ, ನರಸಿಂಹಮೂರ್ತಿ ಹಾಗೂ ಲತಾ ಹೇಮಂತಕುಮಾರ್ ಹೆಸರುಗಳನ್ನು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

**ಪ್ರಕರಣದ ಹಿನ್ನೆಲೆ:** 07.02.2025ರಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಬೆಂಗಳೂರು ಗ್ರಾಮಾಂತರ ಜೇಡಿಎಸ್ ಜಿಲ್ಲಾ ಅಧ್ಯಕ್ಷ ಮುನೇಗೌಡರಿಗೆ ಅಧಿಕೃತ ಅನುಮತಿ ಪತ್ರ ನೀಡಿದ್ದರು. ಅದರ ಬೆನ್ನಲ್ಲೇ 08.02.2025ರಂದು ನಗರಸಭೆಯ ಎಲ್ಲಾ ಜೇಡಿಎಸ್ ಸದಸ್ಯರಿಗೆ ಪಕ್ಷದ ವಿಪ್ ಜಾರಿಗೊಂಡಿತ್ತು.

13.02.2025ರಂದು ನಡೆದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಯಲ್ಲಿ ವಿಪ್ ಉಲ್ಲಂಘನೆ ಮಾಡಿಕೊಂಡು ಜೇಡಿಎಸ್ ಸದಸ್ಯರು ಕ್ರಾಸ್ ಮತದಾನ ಮಾಡಿದ ಆರೋಪ ಕೇಳಿಬಂದಿತ್ತು. ಬಿಜೆಪಿ ಚಿಹ್ನೆಯಿಂದ ಆಯ್ಕೆಯಾಗಿದ್ದ ಬಳಿಕ ಕಾಂಗ್ರೆಸ್ ಪಕ್ಷಕ್ಕೆ ಪಕ್ಷಾಂತರಗೊಂಡಿದ್ದ ಅಧ್ಯಕ್ಷ ಎನ್. ಗಣೇಶ್ ಅವರಿಗೆ ಅಡ್ಡಮತದಾನ ನಡೆದಿರುವುದು ಈ ಪ್ರಕರಣದ ಪ್ರಮುಖ ಅಂಶವಾಗಿ–ತ್ತು.

03.03.2025ರಂದು ನಗರಸಭೆ ಆಯುಕ್ತರ ಮೂಲಕ ಜಿಲ್ಲಾಧಿಕಾರಿಗೆ ದೂರು ಸಲ್ಲಿಸಿ, ಕರ್ನಾಟಕ ಸ್ಥಳೀಯ ಸಂಸ್ಥೆಗಳ (ಪಕ್ಷಾಂತರ ನಿಷೇಧ) ಅಧಿನಿಯಮ 1987ರ ಕಲಂ 4(2)(ııı)ರಡಿ ಕ್ರಮ ಕೈಗೊಳ್ಳುವಂತೆ ಮನವಿ ಮಾಡಲಾಯಿತು. 27.03.2025ರಂದು ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಪ್ರಕರಣದ ಮೊದಲ ವಿಚಾರಣೆ ನಡೆಯಿತು.

**ಕಾನೂನು ಪ್ರಕ್ರಿಯೆ ಮತ್ತು ನ್ಯಾಯಾಲಯದ ಬೆಳವಣಿಗೆಗಳು:** ನಿಯಮಾನುಸಾರ ದೂರು 60 ದಿನಗಳೊಳಗೆ ತೀರ್ಮಾನವಾಗಬೇಕಿದ್ದರೂ 09.05.2025ರಂದು ಗಡುವು ಮುಗಿದಿತ್ತು. ಪ್ರಕರಣ ವಿಲೇವಾರಿ ವಿಳಂಬವಾದ ಹಿನ್ನೆಲೆಯಲ್ಲಿ 22.07.2025ರಂದು ಹೈಕೋರ್ಟ್‌ನಲ್ಲಿ ರಿಟ್ ಪಿಟಿಷನ್ 22731/25 ಸಲ್ಲಿಸಿ ಶೀಘ್ರ ತೀರ್ಮಾನಕ್ಕೆ ಸೂಚನೆ ಕೋರಿ ಮನವಿ ಮಾಡಲಾಯಿತು.

04.11.2025ರಂದು ಹೈಕೋರ್ಟ್ ಜಿಲ್ಲಾಧಿಕಾರಿಗೆ 30 ದಿನಗಳೊಳಗೆ ಪ್ರಕರಣ ವಿಲೇವಾರಿ ಮಾಡುವಂತೆ ನಿರ್ದೇಶನ ನೀಡಿದ್ದು, 12.11.2025ರಂದು ಆ ಆದೇಶದ ಪ್ರತಿಯನ್ನು ಜಿಲ್ಲಾಧಿಕಾ–ರಿಗೆ ಸಲ್ಲಿಸಲಾಯಿತು. ಆದಾಗ್ಯೂ 02.12.2025ರಂದು ಗಡುವು ಮುಗಿದರೂ ಆದೇಶ ಹೊರಬರದ ಹಿನ್ನೆಲೆಯಲ್ಲಿ 16.12.2025ರಂದು ಜಿಲ್ಲಾಧಿಕಾರಿಗಳ ವಿರುದ್ಧ ನ್ಯಾಯಾಂಗ ಅವಮಾನ ಅರ್ಜಿ ಸಲ್ಲಿಸಲಾಯಿತು.




19.12.2025ರಂದು ಅವಮಾನ ಅರ್ಜಿಗೆ ನೋಟಿಸ್ ಜಾರಿಯಾಗಿ 16.03.2026ಕ್ಕೆ ವಿಚಾರಣೆ ನಿಗದಿಯಾಯಿತು. ಇದೇ ನಡುವೆ 23.12.2025ರಂದು ಮೂಲ ದೂರು ಪ್ರಕರಣದ ಅಂತಿಮ ವಿಚಾರಣೆ ಪೂರ್ಣಗೊಂಡು ಆದೇಶ ಕಾಯ್ದಿರಿಸಲಾಯಿತು. ಅಂತಿಮವಾಗಿ 24.02.2026ರಂದು ಜಿಲ್ಲಾಧಿಕಾರಿ ಆದೇಶ ಹೊರಡಿಸಿ ಸದಸ್ಯರನ್ನು ಅನರ್ಹಗೊಳಿಸಿದರು.

**ಈ ಪ್ರಕರಣದಲ್ಲಿ ಕರ್ನಾಟಕ ಹೈಕೋರ್ಟ್‌ನಲ್ಲಿ ನ್ಯಾಯವಾದಿ ಸುಶಾಂತ್ ವಿ.ಎ ಅವರು ವಾದ ಮಂಡಿಸಿದ್ದರು.**

**ಕಾನೂನು ಮೇಲುಗೈಗೆ ಉದಾಹರಣೆ:** ಕಾನೂನಿನ ಪ್ರಕಾರ 60 ದಿನಗಳೊಳಗೆ ತೀರ್ಮಾನವಾಗಬೇಕಿದ್ದ ಪ್ರಕರಣವು ಸುಮಾರು ಒಂದು ವರ್ಷಕ್ಕೂ ಹೆಚ್ಚು ಕಾಲ ಮುಂದುವರಿದಿದ್ದು ಕೆಲ ರಾಜಕೀಯ ಒತ್ತಡಗಳ ಕುರಿತು ಚರ್ಚೆಗಳು ಕೇಳಿಬಂದಿದ್ದರೂ, ಕಾನೂನಿನ ಮುಂದೆ ಯಾವುದೇ ಪ್ರಭಾವ ನಡೆಯುವುದಿಲ್ಲ ಎಂಬ ಸಂದೇಶವನ್ನು ಈ ಆದೇಶ ನೀಡಿದೆ. ವಿಳಂಬವಾದರೂ ಕಾನೂನು ತನ್ನ ದಾರಿಯಲ್ಲಿ ಕಾರ್ಯನಿರ್ವಹಿಸಿ ಕ್ರಮ ಕೈಗೊಂಡಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾನೂನಿನ ಪ್ರಾಬಲ್ಯವನ್ನು ಸ್ಪಷ್ಟಪಡಿಸಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ.

**ರಾಜಕೀಯ ಪರಿಣಾಮ:** ಜಿಲ್ಲಾಧಿಕಾರಿಗಳ ಆದ–ೇಶದೊಂದಿಗೆ ನಗರಸಭೆಯ ಉಪಾಧ್ಯಕ್ಷ ಸ್ಥಾನ ಸೇರಿದಂತೆ ವಿವಿಧ ಸಮಿತಿ ಹುದ್ದೆಗಳು ಖಾಲಿಯಾಗಿದ್ದು, ಆಡಳಿತಾತ್ಮಕ ಹಾಗೂ ರಾಜ–ಕೀಯ ಸಮೀಕರಣಗಳಲ್ಲಿ ಬದಲಾವಣೆ ಸಂಭವಿಸುವ ಸಾಧ್ಯತೆ ಇದೆ. ಅನರ್ಹಗೊಂಡ ಸದಸ್ಯರು ನ್ಯಾಯಾಲಯದ ಮೊರೆ ಹೋಗುವ ಸಾಧ್ಯತೆ ಇದ್ದು, ಪ್ರಕರಣದ ಮುಂದಿನ ಬೆಳವಣಿಗೆಗಳು ಸ್ಥಳೀಯ ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿವೆ.



ನೆಲಮಂಗಲ ನಗರಸಭೆಯಲ್ಲಿ ಪಕ್ಷದ ವಿಪ್ ಉಲ್ಲಂಘಿಸಿ ನಡೆದ ಅಡ್ಡ ಮತದಾನವು ಪಕ್ಷದ ನೈತಿಕತೆ ಮತ್ತು ಸಂಘಟನೆ ಶಿಸ್ತಿಗೆ ವಿರುದ್ಧವಾಗಿತ್ತು. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ಪಕ್ಷ ಕಾನೂನುಬದ್ಧ ಹೋರಾಟ ನಡೆಸಿದ್ದು, ಅಂತಿಮವಾಗಿ ಜಿಲ್ಲಾಧಿಕಾರಿಗಳ ಆದೇಶದ ಮೂಲಕ ಸತ್ಯಕ್ಕೆ ನ್ಯಾಯ ದೊರೆತಿದೆ.

ಪ್ರಕರಣವು ವಿಳಂಬವಾದರೂ ಕಾನೂನು ಪ್ರಕ್ರಿಯೆ ತನ್ನ ದಾರಿಯಲ್ಲಿ ಮುಂದುವರಿದು ತೀರ್ಮಾನ ಹೊರಬಂದಿರುವುದು, ಯಾವುದೇ ಪ್ರಭಾವ ಅಥವಾ ಒತ್ತಡಗಳು ಕಾನೂನಿನ ಮುಂದೆ ನಡೆಯುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ. ಪಕ್ಷದ ತತ್ವ ಮತ್ತು ಶಿಸ್ತನ್ನು ಕಾಪಾಡುವುದು ನಮ್ಮ ಮೊದಲ ಆದ್ಯತೆ ಆಗಿದ್ದು, ಮುಂದಿನ ದಿನಗಳಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಪಾರದರ್ಶಕ ಮತ್ತು ಹೊಣೆಗಾರಿಕೆಯ ಆಡಳಿತಕ್ಕೆ ಜೆಡಿಎಸ್ ಬದ್ಧವಾಗಿದೆ ಎಂದು ವಕ್ತಾರರೂ ಹಾಗೂ ವಕೀಲ ಕನಕರಾಜು ತಿಳಿಸಿದ್ದಾರೆ.

ನೆಲಮಂಗಲದ ಜನರು ಹೃದಯಪೂರ್ವಕವಾಗಿ ನೀಡಿದ ಮತವು ಕೇವಲ ರಾಜಕೀಯ ಗೆಲುವಿನ ಚಿಹ್ನೆಯಲ್ಲ, ಅದು ವಿಶ್ವಾಸ ಮತ್ತು ಭಾವನೆಯ ಪ್ರತೀಕವಾಗಿದೆ. ಆ ವಿಶ್ವಾಸವನ್ನು ಮರೆತು ನಡೆದುಕೊಳ್ಳುವ ಘಟನೆಗಳು ಯುವಕರ ಮನಸ್ಸಿಗೆ ನೋವುಂಟು ಮಾಡಿವೆ. ಮತದಾರರ ನಂಬಿಕೆಯನ್ನು ಕಾಪಾಡುವುದು ಜನಪ್ರತಿನಿಧಿಗಳ ಮೊದಲ ಕರ್ತವ್ಯ ಎಂಬುದು ಈ ಸಂದರ್ಭ ಮತ್ತೊಮ್ಮೆ ಸ್ಪಷ್ಟವಾಗಿದೆ.



ಇದೇ ವೇಳೆ ಯುವಕರಾಗಿ ನಾವು ಹಿಂದೆ ಸರಿಯುವವರಲ್ಲ. ಸತ್ಯದ ಪರವಾಗಿ ನಿಲ್ಲುವ ಧೈರ್ಯ ಮತ್ತು ಪಕ್ಷದ ಮೌಲ್ಯಗಳನ್ನು ಕಾಯುವ ಸಂಕಲ್ಪ ನಮ್ಮದಲ್ಲಿದೆ. ಯಾವುದೇ ಸವಾಲುಗಳಿದ್ದರೂ ಜನರ ವಿಶ್ವಾಸವೇ ನಮ್ಮ ಶಕ್ತಿ ಎಂಬ ನಂಬಿಕೆಯಿಂದ ಮುಂದೆ ಸಾಗುತ್ತೇವೆ. ಸಂಘಟನೆಯ ಗೌರವ ಮತ್ತು ಮತದಾರರ ಭಾವನೆಗಳನ್ನು ರಕ್ಷಿಸಲು ಯುವ ಘಟಕ ಇನ್ನಷ್ಟು ದೃಢವಾಗಿ ಕಾರ್ಯನಿರ್ವಹಿಸಲಿದೆ ಎಂದು ಟೌನ್ ಜೆಡಿ–ಎಸ್ ಯುವ ಘಟಕದ ಅಧ್ಯಕ್ಷ ವಿಷ್ಣು ಕೆ.ಆರ್ ತಿಳಿಸಿದ್ದಾರೆ.



ಈ ಪ್ರಕರಣದಲ್ಲಿ ಪಕ್ಷದ ವಿಪ್ ಉಲ್ಲಂಘನೆ ಹಾಗೂ ಅಡ್ಡ ಮತದಾನ ಸ್ಪಷ್ಟವಾಗಿದ್ದು, ಕರ್ನಾಟಕ ಸ್ಥಳೀಯ ಸಂಸ್ಥೆಗಳ ಪಕ್ಷಾಂತರ ನಿಷೇಧ ಕಾಯ್ದೆ ಅಧಿನಿಯಮದಡಿ ಕ್ರಮ ಕೈಗೊಳ್ಳುವುದು ಅನಿವಾರ್ಯವಾಗಿ–ತ್ತು. ಕಾನೂನಿನ ಪ್ರಕಾರ 60 ದಿನಗಳೊಳಗೆ ತೀರ್ಮಾನವಾಗಬೇಕಿದ್ದ ಪ್ರಕರಣವು ವಿಳಂಬವಾದರೂ, ಅಂತಿಮವಾಗಿ ಕಾನೂನು ತನ್ನ ಪ್ರಕ್ರಿಯೆ ಅನುಸರಿಸಿ ನ್ಯಾಯ ದೊರಕಿಸಿದೆ.


ಯಾವುದೇ ರಾಜಕೀಯ ಪ್ರಭಾವ ಅಥವಾ ಒತ್ತಡಗಳು ಕಾನೂನಿನ ಮುಂದೆ ಪರಿಣಾಮ ಬೀರುವುದಿಲ್ಲ ಎಂಬುದನ್ನು ಈ ಆದೇಶ ಮತ್ತೊಮ್ಮೆ ಸಾಬೀತುಪಡಿಸಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಕ್ಷದ ಶಿಸ್ತು ಮತ್ತು ಕಾನೂನು ಬದ್ಧತೆ ಕಾಪಾಡುವುದು ಅತ್ಯಂತ ಮುಖ್ಯವಾಗಿದ್ದು, ಈ ತೀರ್ಮಾನವು ಸ್ಥಳೀಯ ಸಂಸ್ಥೆಗಳ ಸದಸ್ಯರಿಗೆ ಸ್ಪಷ್ಟ ಸಂದೇಶ ನೀಡುತ್ತದೆ. ಮುಂದಿನ ದಿನಗಳಲ್ಲಿ ಇಂತಹ ಪ್ರಕರಣಗಳಲ್ಲಿ ಕಾನೂನು ಪ್ರಕ್ರಿಯೆ ಶೀಘ್ರಗತಿಯಲ್ಲಿ ನಡೆಯಬೇಕು ಎಂಬ ನಿರೀಕ್ಷೆಯಿದೆ ಎಂದು ನ್ಯಾಯವಾದಿ ಸುಶಾಂತ್ ವಿ.ಎ ತಿಳಿಸಿದ್ದಾರೆ.



ನಗರಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಯಲ್ಲಿ ಪಕ್ಷದ ವಿಪ್ ಜಾರಿಯಾಗಿದ್ದರೂ ಅದನ್ನು ಉಲ್ಲಂಘಿಸಿ ನಡೆದ ಅಡ್ಡ ಮತದಾನ ಪಕ್ಷದ ಶಿಸ್ತುಗೆ ಧಕ್ಕೆಯಾಗಿದೆ. ಪಕ್ಷದ ತತ್ವ ಮತ್ತು ನಿರ್ಧಾರಗಳಿಗೆ ಬದ್ಧರಾಗಿರುವ ನಾವು ಕಾನೂನುಬದ್ಧವಾಗಿ ಕ್ರಮ ಕೈಗೊಳ್ಳುವಂತೆ ದೂರು ಸಲ್ಲಿಸಿದ್ದೇವೆ. ವಿಳಂಬವಾದರೂ ನ್ಯಾಯ ದೊರೆತಿರುವುದು ಸಂತೋಷದ ವಿಷಯ.

ಈ ಆದೇಶವು ಪಕ್ಷದ ಶಿಸ್ತು ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ಕಾಪಾಡುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದ್ದು, ಯಾವುದೇ ರಾಜಕೀಯ ಪ್ರಭಾವಕ್ಕಿಂತ ಕಾನೂನು ಮೇಲುಗೈ ಸಾಧಿಸುತ್ತದೆ ಎಂಬ ಸಂದೇಶ ನೀಡಿದೆ. ಮುಂದಿನ ದಿನಗಳಲ್ಲಿ ನಗರಸಭೆಯಲ್ಲಿ ಪಕ್ಷದ ಸಂಘಟನೆ ಮತ್ತಷ್ಟು ಬಲವಾಗಲು ಹಾಗೂ ಆಡಳಿತದಲ್ಲಿ ಪಾರದರ್ಶಕತೆ ಹೆಚ್ಚಿಸಲು ನಾವು ಕೆಲಸ ಮಾಡುತ್ತೇವೆ ಎಂದು ಜೆಡಿಎಸ್ ನಗರಸಭೆ ಸದಸ್ಯ ಅಂಜನಾಮೂರ್ತಿ ತಿಳಿಸಿದ್ದಾರೆ.

ನೆಲಮಂಗಲ ನಗರಸಭೆಯಲ್ಲಿ ನಡೆದ ಘಟನೆ ಪಕ್ಷದ ಸಂಘಟನೆಗೆ ಒಂದು ಪಾಠವಾಗಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಕ್ಷದ ತತ್ವ ಹಾಗೂ ಜನಪ್ರತಿನಿಧಿಗಳ ಹೊಣೆಗಾರಿಕೆ ಎಷ್ಟು ಮಹತ್ವದ್ದೆಂಬುದನ್ನು ಸ್ಪಷ್ಟಪಡಿಸಿದೆ. ವಿಷಯವು ಕಾನೂನು ಹಂತದಲ್ಲಿ ಸಾಗಿದ್ದರೂ, ಅಂತಿಮವಾಗಿ ಸಂಬಂಧಿತ ಅಧಿಕಾರಿಗಳು ನೀಡಿದ ತೀರ್ಮಾನವನ್ನು ನಾವು ಗೌರವಿಸುತ್ತೇವೆ.



ಜನರು ಪಕ್ಷದ ಸಿದ್ಧಾಂತಗಳನ್ನು ನಂಬಿ ಮತ್ತು ಆಧರಿಸಿ ಒಂದು ಪಕ್ಷಕ್ಕೆ ಮತ ನೀಡಿರುತ್ತಾರೆ. ಆದರೆ ಚುನಾಯಿತ ಪ್ರತಿನಿಧಿಗಳು ಈ ರೀತಿ ಪಕ್ಷಾಂತರ ಮಾಡುವುದು ಪಕ್ಷದ ಮೇಲಿನ ನಂಬಿಕೆಗೆ ಧಕ್ಕೆ ತರುವುದಷ್ಟೇ ಅಲ್ಲ, ಮತದಾರರಿಗೆ ಮಾಡಿದ ಅವಮಾನವಾಗಿದ್ದು ಕಾನೂನಿನ ಮೇಲಿನ ಗೌರವಕ್ಕೂ ಧಕ್ಕೆಯಾಗುತ್ತದೆ.

ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಭಿನ್ನಾಭಿಪ್ರಾಯಗಳು ಸಹಜವಾದರೂ, ಕಾನೂನು ಮತ್ತು ನಿಯಮಗಳ ಪರಿಧಿಯಲ್ಲಿ ನಡೆದುಕೊಳ್ಳುವುದು ಪ್ರತಿಯೊಬ್ಬ ಜನಪ್ರತಿನಿಧಿಯ ಕರ್ತವ್ಯವಾಗಿದೆ. ಈ ಬೆಳವಣಿಗೆಯ ಬಳಿಕ ಸಂಘಟನೆ ಇನ್ನಷ್ಟು ಬಲಪಡಿಸುವುದು, ಕಾರ್ಯಕರ್ತರಲ್ಲಿ ವಿಶ್ವಾಸ ಹೆಚ್ಚಿಸುವುದು ಹಾಗೂ ಜನರ ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆ ನೀಡುವುದು ನಮ್ಮ ಮುಂದಿನ ಗುರಿಯಾಗಿದೆ ಎಂದು ತಾಲೂಕು ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಸುರೇಶ್ ತಿಳಿಸಿದ್ದಾರೆ.

# ಸೂರಿಗಾಗಿ ನೀಡುವ ಸಹಾಯಧನವನ್ನ ಸದುಪಯೋಗ ಮಾಡಿಕೊಳ್ಳಿ: ಎಸ್.ಟಿ ಸೋಮಶೇಖರ್



ಯಶವಂತಪುರ: ಸರ್ಕಾರಿ ಸಹಾಯಧನವನ್ನು ಸದುಪಯೋಗಪಡಿಸಿಕೊಂಡು ಸ್ವಂತ ಸೂರಿನ ಕನಸನ್ನು ನನಸಾಗಿಸಿಕೊಳ್ಳಿ ಎಂದು ಶಾಸಕ ಎಸ್.ಟಿ ಸೋಮಶೇಖರ್ ಸಲಹೆ ನೀಡಿದ್ದಾರೆ. ಕ್ಷೇತ್ರದ ಹೇರೋಹಳ್ಳಿ ವಾರ್ಡ್‌ನ ಕೆಂಪೇಗೌಡ ಪಾಲಿಕೆ ಭವನದಲ್ಲಿ ಫಲಾನುಭವಿಗಳಿಗೆ ಒಂಟಿ ಮನೆ ಸಹಾಯಧನದ ಆದೇಶ ಪತ್ರ ವಿತರಿಸಿ ಮಾತನಾಡಿದರು.

ಸ್ವಂತ ನಿವೇಶನ ಹೊಂದಿರುವ ಆರ್ಥಿಕವಾಗಿ ಹಿಂದುಳಿದ ಅರ್ಹ ಫಲಾನುಭವಿಗಳಿಗೆ ಸ್ವಂತ ಸೂರು ನಿರ್ಮಿಸಿಕೊಳ್ಳಲು ಒಂಟಿ ಮನೆ ಯೋಜನೆಯಡಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವತಿಯಿಂದ 5 ಲಕ್ಷ ಸಹಾಯಧನ ನೀಡಲಾಗುತ್ತಿದೆ. ಸರ್ಕಾರಿ ಸಹಾಯಧನದ ಜತೆಗೆ ಫಲಾನುಭವಿಗಳು ಸ್ವಂತ ಹಣವನ್ನು ಹಾಕಿ ಗುಣಮಟ್ಟದ ಚಿಕ್ಕಚೊಕ್ಕ ಸೂರು ನಿರ್ಮಿಸಿಕೊಂಡು ನೆಮ್ಮದಿಯಾಗಿರಿ ಎಂದು ಹಾರೈಸಿದರು.

ಕಟ್ಟಡ ನಿರ್ಮಾಣದ ವಿವಿಧ ಹಂತಗಳಲ್ಲಿ ಸಹಾಯಧನ ಸಿಗಲಿದೆ. ಪ್ರತಿ ಹಂತದ ಕಟ್ಟಡ ನಿರ್ಮಾಣದ ಫೋಟೋ ತೆಗೆಸಿ ಅಪ್ಲೋಡ್ ಮಾಡಿಸಿ ಖಾತೆಗೆ ಹಣ ಜಮಾವಣೆ ಆಗುತ್ತದೆ. ನಿಯಮದಂತೆ ಫಲಾನುಭವಿಗಳು ಸಹಾಯಧನ ಪಡೆಯಲು ಜಿಬಿಎ ಅಧಿಕಾರಿಗಳು ಸಹಕರಿಸಿ ಎಂದು ಇದೇ ವೇಳೆ ಸೂಚಿಸಿದರು.

ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸರ್ಕಾರದಿಂದ ಸಾಕಷ್ಟು ಅನುದಾನ ತರಲಾಗಿದೆ. ರಸ್ತೆ, ಚರಂಡಿ, ರಾಜ–ಕಾಲುವೆ ತಡೆಗೋಡೆ, ಒಳಚರಂಡಿ ನಿರ್ಮಾಣ, ಬೀದಿ ದೀಪಗಳ ಅಳವಡಿಕೆ, ಕೆರೆಗಳ ಪುನಶ್ಚೇತನ ಕಾರ್ಯ, ಉದ್ಯಾನಗಳ ಅಭಿವೃದ್ಧಿ ಸೇರಿ ಕ್ಷೇತ್ರದಾದ್ಯಂತ ಅಗತ್ಯ ಮೂಲಸೌಕರ್ಯ ಕಲ್ಪಿಸಲು ಸಮರೋಪಾದಿಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಇದೇ ವೇಳೆ ತಿಳಿಸಿದರು

ಕುಂಬಳಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊಸಪಾಳ್ಯ ರಸ್ತೆ ಅಭಿವೃದ್ಧಿ, ಕೆಂಗಲ್ ಹನುಮಂತಯ್ಯ ವಾರ್ಡ್‌ನ ಕೆಂಗೇರಿ ಉಪನಗರದಲ್ಲಿ ಒಳಚರಂಡಿ, ದೊಡ್ಡಬಿದರಕಲ್ಲು ವಾರ್ಡ್‌ನ ಚನ್ನನಾಯಕನಪಾಳ್ಯ, ಇಂದಿರಾನಗರ, ಅಂದ್ರಹಳ್ಳಿ ವಾರ್ಡ್‌ನ ಅಂದ್ರಹಳ್ಳಿಯಲ್ಲಿ ಡಾಂಬರು ಹಾಕುವ ಕಾಮಗಾರಿಗಳಿಗೆ ಶಾಸಕ ಎಸ್ .ಟಿ ಸೋಮಶೇಖರ್ ಚಾಲನೆ ನೀಡಿದರು. ಜತೆಗೆ ತರಬೇತಿ ಪಡೆದ ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ಉಚಿತವಾಗಿ ವಿತರಿಸಿದರು

ತಾವರೆಕೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರೇವಣ್ಣಸಿದ್ದಯ್ಯ, ಹೇರೋಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಧರ್, ಮಹಿಳಾ ಅಧ್ಯಕ್ಷೆ ಸುಮಾ ಜನಾರ್ಧನ್, ಕೆಂಗೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾಗರಾಜ್, ಮಹಿಳಾ ಅಧ್ಯಕ್ಷೆ ಲಕ್ಷ್ಮೀ ಪ್ರಭುರಾಜ್, ಮುಖಂಡರಾದ ಚನ್ನನಾಯಕನಪಾಳ್ಯ ಪ್ರಸಾದ್ ಕುಮಾರ್, ಅಂದ್ರಳ್ಳಿಯ ವಿ.ನಾಗರಾಜ್, ಅಂದ್ರಹಳ್ಳಿ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಮುನಿರಾಜು, ಮಹಿಳಾ ಅಧ್ಯಕ್ಷೆ ಶೃತಿ ಗೌಡ, ಯುವ ಕಾಂಗ್ರೆಸ್ ಅಧ್ಯಕ್ಷ ಅರುಣ್ ಬೈಲಪ್ಪ, ದೊಡ್ಡಬಿದರಕಲ್ಲು ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಲಿಖಿತ್‌ಗೌಡಮೊದಲಾದವ–ರಿದ್ದರು

# ಅಂಗನವಾಡಿ ಮಕ್ಕಳ ಪೌಷ್ಟಿಕ ಆಹಾರಕ್ಕೆ 50 ಪೈಸೆ ಅನುದಾನ? ಸರ್ಕಾರದ ಆದೇಶಕ್ಕೆ ಆಕ್ರೋಶ



ಬೆಂಗಳೂರು: ರಾಜ್ಯ ಸರ್ಕಾರದ ಉಚಿತ ಯೋಜನೆಗಳ ನಡುವೆ ಖಜಾನೆ ಮೇಲಿನ ಒತ್ತಡ ಹೆಚ್ಚಿದೆಯೇ ಎಂಬ ಪ್ರಶ್ನೆ ಮೂಡುವಂತೆಯೇ, ಅಂಗನವಾಡಿ ಮಕ್ಕಳ ಪೌಷ್ಟಿಕ ಆಹಾರಕ್ಕೆ ಸಂಬಂಧಿಸಿದಂತೆ ಹೊರಬಿದ್ದ ಆದೇಶ ವಿವಾದಕ್ಕೆ ಕಾರಣವಾಗಿದೆ. ದುಬಾರಿ ಬೆಲೆ ಏರಿಕೆಯ ನಡುವೆಯೇ ಮಕ್ಕಳ ತರಕಾರಿ ಖರೀದಿಗೆ ದಿನಕ್ಕೆ ಕೇವಲ 50 ಪೈಸೆ ನಿಗದಿ ಮಾಡಿರುವುದು ಸಾರ್ವಜನಿಕ ವಲಯದಲ್ಲಿ ತೀವ್ರ ಟೀಕೆಗೆ ಗುರಿಯಾಗಿದೆ.

**ತರಕಾರಿಗೆ ಕೇವಲ 50 ಪೈಸೆ ಅನುದಾನ:** ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿ ಕಲಿಯುತ್ತಿರುವ ಪುಟ್ಟ ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸುವ ಹೊಣೆ ಸರ್ಕಾರದ ಮೇಲಿದೆ. ಆದರೆ ಪ್ರತಿ ಮಗುವಿಗೆ ದಿನಕ್ಕೆ ಕೇವಲ 0.50 ಪೈಸೆ ತರಕಾರಿ ಖರೀದಿಗೆ ನಿಗದಿಪಡಿಸಿರುವುದು ಅಚ್ಚರಿಯ ವಿಷಯವಾಗಿದೆ. ಇದರಂತೆ ಒಂದು ಅಂಗನವಾಡಿಯಲ್ಲಿ 10 ಮಕ್ಕಳು ಇದ್ದರೆ, ದಿನದ ತರಕಾರಿ ಖರೀದಿಗೆ ಒಟ್ಟು 5 ರೂಪಾಯಿ ಮಾತ್ರ ಅನುದಾನ ಸಿಗುವಂತಾಗಿದೆ.

ಪ್ರಸ್ತುತ ಪ್ರತಿ ಮಗುವಿಗೆ ಪೌಷ್ಟಿಕ ಆಹಾರಕ್ಕಾಗಿ ದಿನಕ್ಕೆ ಸುಮಾರು 18.50 ರೂ. ವೆಚ್ಚ ಮಿತಿಯನ್ನು ನಿಗದಿಪಡಿಸಲಾಗಿದ್ದು, ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲು 60:40 ಅನುಪಾತದಲ್ಲಿದೆ. ಈ ಮೊತ್ತದಲ್ಲಿ ಊಟಕ್ಕೆ 8 ರೂ., ಉಪಾಹಾರಕ್ಕೆ 12 ರೂ., ಮೊಟ್ಟೆಗೆ 6 ರೂ. ಸೇರಿದಂತೆ ವಿವಿಧ ಖರ್ಚುಗಳನ್ನು ಒಳಗೊಂಡಿದ್ದು, ತರಕಾರಿಗೆ ಮಾತ್ರ ಅತಿ ಕಡಿಮೆ ಮೊತ್ತ ಮೀಸಲಿರಿಸಲಾಗಿದೆ.

ಮಾರುಕಟ್ಟೆಯಲ್ಲಿ ತರಕಾರಿ ಬೆಲೆ ಏರಿಕೆಯಿರುವ ಹಿನ್ನೆಲೆಯಲ್ಲಿ 50 ಪೈಸೆ ಅನುದಾನದಿಂದ ಗುಣಮಟ್ಟದ ಆಹಾರ ಒದಗಿಸುವುದು ಕಷ್ಟಕರ ಎಂದು ಅಂಗನವಾಡಿ ಕಾರ್ಯಕರ್ತೆಯರು ಅಭಿಪ್ರಾಯಪಟ್ಟಿದ್ದಾರೆ. ಹಲವು ಕಡೆಗಳಲ್ಲಿ ಹಣ್ಣು ಮತ್ತು ತರಕಾರಿ ಖರೀದಿಯನ್ನು ಕಾರ್ಯಕರ್ತೆಯರೇ ತಮ್ಮ ಖರ್ಚಿನಲ್ಲಿ ಪೂರೈಸಬೇಕಾದ ಪರಿಸ್ಥಿತಿ ಉಂಟಾಗಿದೆ ಎಂಬ ಅಸಮಾಧಾನವೂ ಕೇಳಿಬರುತ್ತಿದೆ.

ಈ ನಿರ್ಧಾರವು ಮಕ್ಕಳ ಪೌಷ್ಟಿಕಾಂಶದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದ್ದು, ಸರ್ಕಾರ ತಕ್ಷಣವೇ ಅನುದಾನವನ್ನು ಪರಿಷ್ಕರಿಸಿ ವಾಸ್ತವ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಿಸಬೇಕು ಎಂದು ಸಾರ್ವಜನಿಕರು ಮತ್ತು ಪೋಷಕರು ಆಗ್ರಹಿಸಿದ್ದಾರೆ.



# ಸಾರ್ವಜನಿಕರಿಗೆ ತೊಂದರೆಯಾಗದಂತೆ ವ್ಯಾಪಾರ ಮಾಡಿ: ಶಾಸಕ ಎಸ್. ಮುನಿರಾಜು

ಪೀಣ್ಯ ದಾಸರಹಳ್ಳಿ: ಕೇಂದ್ರ ಸರ್ಕಾರದ ಯೋಜನೆ ಅಡಿಯಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಗ್ಯಾರಂಟಿ ಇಲ್ಲದೆ 10ಸಾವಿರ ಹಣ ಸಹಾಯ ನೀಡಲಿದೆ. ಅದಕ್ಕಾಗಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ನೀಡಲಾಗುತ್ತಿದೆ' ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಬಾಗಲಗುಂಟೆಯ ಜಿಬಿಎ ಕಚೇರಿಯ ಆವರಣದಲ್ಲಿ ಪಿಎಂ ಸ್ವನಿಧಿ ಯೋಜನೆಯ ಆಧಾರದ ಅಡಿಯಲ್ಲಿ ಶಾಸಕ ಎಸ್. ಮುನಿರಾಜು ಅವರು ಕ್ಷೇತ್ರದ ಬೀದಿಬದಿ ವ್ಯಾಪಾರಿಗಳಿಗೆ ಸರ್ಕಾರದಿಂದ ನೀಡಲಾಗುವ ಗುರುತಿನ ಕಾರ್ಡ್ ನೀಡಿ ಮಾತನಾಡಿದರು.

ಎಲ್ಲೆಂದರಲ್ಲಿ ತಳ್ಳುವ ಗಾಡಿ ನಿಲ್ಲಿಸಿ ವ್ಯಾಪಾರ ಮಾಡುತ್ತಾ ಸಾರ್ವಜನಿಕರಿಗೆ ತೊಂದರೆ ನೀಡಬೇಡಿ. ಟ್ರಾಫಿಕ್ ಸಮಸ್ಯೆ, ಅಪಘಾತ ವಾಗುವ ಸ್ಥಳದಲ್ಲಿ ವ್ಯಾಪಾರ ಮಾಡದೆ ವ್ಯವಸ್ಥಿತ ಸ್ಥಳದಲ್ಲಿ ವ್ಯಾಪಾರ ಮಾಡಿ ತಮ್ಮ ಬದುಕನ್ನು ರೂಪಿಸಿಕೊಳ್ಳಿ' ಎಂದು ಸಲಹೆ ನೀಡಿದರು.

ಸುಮಾರು ವರ್ಷಗಳಿಂದ ದಾಸರಹಳ್ಳಿ ಮೆಟ್ರೋ ಸೇತುವೆ ಕೆಳಗಡೆ ನೂರಾರು ವ್ಯಾಪಾರಿಗಳು ವ್ಯಾಪಾರ ಮಾಡುತ್ತಾ ಬದುಕು ಕಟ್ಟಿಕೊಂಡಿದ್ದಾರೆ. ಅವರ ಅನುಕೂಲಕ್ಕಾಗಿ ಮೆಟ್ರೋ ಎಂಡಿ ಅವರ ಬಳಿ 8*10 ಅಡಿ ಶೆಡ್ ವ್ಯವಸ್ಥೆ ಮಾಡಿ, ವಿದ್ಯುತ್ ಸಂಪರ್ಕ ನೀಡಿದರೆ ಪ್ರತಿ ತಿಂಗಳು ಬಾಡಿಗೆ ನೀಡಲು ವ್ಯಾಪಾರಿಗಳು ಮುಂದಾಗಿದ್ದಾರೆ ಎಂದು ಅವರಿಗೂ ಮನವಿ ಮಾಡಲಾಗಿದೆ'ಎಂದು ತಿಳಿಸಿದರು.

ಇದೇ ವೇಳೆ ನೂರಾರು ವ್ಯಾಪಾರಿಗಳಿಗೆ ಗುರುತಿನ ಚೀಟಿ ವಿತರಿಸಿದರು. ದಾಸರಹಳ್ಳಿ ಜಂಟಿ ಆಯುಕ್ತೆ ಪಲ್ಲವಿ ಕೆ.ಆರ್ ಮತ್ತು ಕಲ್ಯಾಣಾಧಿಕಾರಿಗಳು ವ್ಯಾಪಾರಿಗಳು ಇದ್ದರು.

RAJARATHA CYBER
All Online Services Under One Roof!
• Aadhaar, PAN Card, Voter ID, Ration Card
• e-Khata, Senior Citizen Card
& Other Government Services
• Address: Junior College Road, Nelamangala
Contact: 9886926812 for medicts

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.

# ಎನ್.ಡಿ.ಎ ಸರ್ಕಾರದ ಬಡವರ ವಿರೋಧಿ ನೀತಿಯ ವಿರುದ್ಧ ಮಾಜಿ ಸಚಿವ ಎಚ್.ಆಂಜನೇಯ ಅಕ್ರೋಶ



ಹೊಳಲ್ಕೆರೆ : ದೇಶದ ಕೋಟ್ಯಾಂತರ ಜನರ ಬದುಕಿಗೆ ಉದ್ಯೋಗದ ಶಕ್ತಿ ನೀಡಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನು ರದ್ದು ಪಡಿಸಿರುವ ಕೇಂದ್ರ ಎನ್.ಡಿ.ಎ ಸರ್ಕಾರದ ಬಡವರ ವಿರೋಧಿ ನೀತಿಯ ವಿರುದ್ಧ ಮಾಜಿ ಸಚಿವ ಎಚ್.ಆಂಜನೇಯ ಅಕ್ರೋಶ ವ್ಯಕ್ತಪಡಿಸಿದರು.

ಅವರು ಮಂಗಳವಾರ ಹೊಳಲ್ಕೆರೆ ತಾಲೂಕು ಚಿಕ್ಕಜಾಜೂರಿನಿಂದ ಹೊಳಲ್ಕೆರೆ ಪಟ್ಟಣ ದವರೆಗೆ ತಾಲೂಕು ಕಾಂಗ್ರೆಸ್ ಪಕ್ಷ ಮನರೇಗಾ ಜಾರಿಗೆ ಆಗ್ರಹಿಸಿ ಕೈಗೊಂಡಿದ್ದ ಪಾದಯಾತ್ರೆ ನೇತೃತ್ವ ವಹಿಸಿ ಪಟ್ಟಣದ ಗಣಪತಿ ಸರಕಲ್ ಜನರನ್ನು ಉದ್ದೇಶಿಸಿ ಮಾತನಾಡಿದರು.

ಹಿಂದಿನ ಯುಪಿಎ ಸರ್ಕಾರದ ಅವಧಿಯಲ್ಲಿ ಜಾರಿಗೆ ತಂದಿದ್ದ ಮನರೇಗಾ ಯೋಜನೆಯನ್ನು ರದ್ದುಗೊಳಿಸಿರುವ ಕೇಂದ್ರ ಸರ್ಕಾರ ಗ್ರಾಮೀಣ ಜನರ ಬದುಕನ್ನು ಅಸ್ತವ್ಯಸ್ತಗೊಳಿಸುತ್ತಿದೆ. ಗ್ರಾಮೀಣ ಭಾಗದಲ್ಲಿರುವ ಬಡವರ, ಮಹಿಳೆಯರ, ಕಾರ್ಮಿಕರ, ರೈತರ ಉಳಿವಿಗಾಗಿ ಈ ಕಾಯ್ದೆಯನ್ನು ಕಾಂಗ್ರೆಸ್ ಪಕ್ಷ ಜಾರಿಗೆ ತಂದಿತ್ತು. ಜನಪರ ಕಾಯ್ದೆಯನ್ನು ಮುಂದುವರಿಸುವ ಬದಲಿಗೆ ಕೇಂದ್ರ ಸರ್ಕಾರ ದುರ್ಬಲಗೊಳಿಸುತ್ತಿದೆ. ಮಹಾತ್ಮ ಗಾಂಧೀಜಿ ಹೆಸರಿನಲ್ಲಿ ರಾಮ ರಾಜ್ಯ ಕಟ್ಟುವ ಕನಸು ಕಂಡಿದ್ದ ಕಾಂಗ್ರೆಸ್ ಪಕ್ಷದ ಯೋಜನೆಯನ್ನು ಉದ್ದೇಶಪೂರ್ವಕವಾಗಿ ನಾಶ ಮಾಡುತ್ತಿದೆ. ಹಾಗಾಗಿ ಗ್ರಾಮೀಣ ಭಾಗದಲ್ಲಿರುವ ಪ್ರತಿಯೊಬ್ಬರು ಮನರೇಗಾ ಜಾರಿಗೆ ಉಗ್ರ ಹೋರಾಟ ನಡೆಸಬೇಕು. ಕೇಂದ್ರ ಸರ್ಕಾರ ಕೈಗೊಂಡಿರುವ ನೀತಿಯನ್ನು ವಿರೋಧಿಸಬೇಕು. ಇಲ್ಲವಾದಲ್ಲಿ ಹಳ್ಳಿಗಳು ನಾಶವಾಗಲಿವೆ. ಅಭಿವೃದ್ಧಿ ಕುಂಠಿತವಾಗಿ ರಸ್ತೆ,ನೀರು, ಆರೋಗ್ಯ,ಸೇವೆಗಳು ಇಲ್ಲದಂತಾಗುತ್ತದೆ. ಹಳ್ಳಿಗಳು ಅಭಿವೃದ್ಧಿ ಇಲ್ಲದೆ ವಿನಾಶದ ಅಂಚಿಗೆ ತಲುಪುತ್ತವೆ.ಉದ್ಯೋಗ ಖಾತರಿಯಲ್ಲಿ ರೈತಾಪಿ ಕೆಲಸಕ್ಕೆ ಸಹಾಯವಾಗಿದೆ. ಶಾಲೆ, ಕಾಲೇಜು, ರಸ್ತೆ,, ಚರಂಡಿ,ಆಶ್ರಯ ಮನೆ ಹೀಗೆ ಹತ್ತಾರು ಕಾಮಗಾರಿಗಳನ್ನು ಉದ್ಯೋಗ ಖಾತರಿಯಲ್ಲಿ ಗ್ರಾಮದ ಜನರೇ ಕೈಗೊಳ್ಳುವ ಶಕ್ತಿಯನ್ನು ಮಹಾತ್ಮ ಗಾಂಧೀಜಿ ರಾಷ್ಟ್ರೀಯ ಉದ್ಯೋಗ ಖಾತರಿ ನೀಡಿದೆ. ಜನರಿಗೆ ನೀಡಿದ್ದ ಅಧಿಕಾರವನ್ನು ಕೇಂದ್ರ ಸರ್ಕಾರ ಕಿತ್ತುಕೊಳ್ಳುತ್ತಿದ್ದು ಜನರು ದುರ್ಬಲರಾಗುವ ಲಕ್ಷಣಗಳನ್ನು ಸೃಷ್ಟಿಸುತ್ತಿದೆ. ಇಂಥ ಜನ ವಿರೋಧಿ ನೀತಿಗಳಿಂದ ದೇಶದಲ್ಲಿರುವ 50 ರಿಂದ 60 ಕೋಟಿ ಜನರು ಬೀದಿಗೆ ಬರುವಂತ ಸ್ಥಿತಿ ನಿರ್ಮಾಣವಾಗುತ್ತಿದೆ. ಕೇಂದ್ರ ಸರ್ಕಾರ ಮನರೇಗಾ ರದ್ದುಪಡಿಸಿರುವ ನೀತಿಯನ್ನು ಖಂಡಿಸಿ ಹೋರಾಟವನ್ನು ಕೈಗೊಳ್ಳುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲಿಸಬೇಕೇಂದು ಕರೆ ನೀಡಿದರು.

ಕಾಂಗ್ರೆಸ್ ಪಕ್ಷದ ವಕ್ತಾರ ನಿತಿನ್ ಚಂದ್ರ ಮೌಳಿ ಮಾತನಾಡಿ, ಕೇಂದ್ರ ಸರ್ಕಾರ ಮಹಾತ್ಮ ಗಾಂಧೀಜಿಯ ಹೆಸರನ್ನು ನಾಶ ಮಾಡಲು ಅವರ ಹೆಸರಿನ ಯೋಜನೆಗಳನ್ನು ರದ್ದುಪಡಿಸುತ್ತಿದೆ. ಉದ್ಯೋಗ ಖಾತ್ರಿ ಮೂಲಕ ಹಳ್ಳಿ ಜನರಿಗೆ ವಿಶೇಷ ಶಕ್ತಿ ಇತ್ತು. ತಮ್ಮ ಊರಿನ ಅಭಿವೃದ್ಧಿಯನ್ನು ತಾವೇ ಮಾಡಿಕೊಳ್ಳುವಂತಹ ಶಕ್ತಿಯನ್ನು ಕಾಂಗ್ರೆಸ್ ಪಕ್ಷ ನೀಡಿದ್ದು, ಅದನ್ನು ರದ್ದುಗೊಳಿಸುವುದು ಸರಿಯಲ್ಲ. ಮರು ಜಾರಿಗೆ ಕೇಂದ್ರ ಸರ್ಕಾರ ಕೂಡಲೇ ಆದೇಶ ಹೊರಡಿಸಬೇಕು ಎಂದು ಆಗ್ರಹಿಸಿದರು.

ಹೊಳಲ್ಕೆರೆಯ ಸರ್ವಾಂಗಿನ ಅಭಿವೃದ್ಧಿಗೆ ಮಾಜಿ ಸಚಿವ ಎಚ್ ಆಂಜನೇಯ ಅಪಾರ ಕೊಡುಗೆ ನೀಡಿದ್ದಾರೆ. ಸಚಿವರಾಗಿದ್ದಾಗ ಹೊಳಲ್ಕೆರೆ ಪಟ್ಟಣದ ಬಸ್ ನಿಲ್ದಾಣ, ಹೈಟೆಕ್ ಶಾಲೆ, ಇಂದಿರ ಕ್ಯಾಂಟೀನ್ , ಹೈಟೆಕ್ ಕಾಲೇಜು, ಸುಮಾರು 20 ವಸತಿಯ ಶಾಲೆಗಳು, ಡಿಪ್ಪೋ ಮಲ್ಲಾಡಿಹಳ್ಳಿ ಹತ್ತಿರ ಪದವಿ ವಸತಿಯುತ ಶಾಲೆ ಚಿತ್ರಹಳ್ಳಿಯಲ್ಲಿ ವಿಶ್ವವಿದ್ಯಾನಿಲಯದಂತಹ ಸೌಲಭ್ಯವುಳ್ಳ ವಸತಿ ಶಾಲೆಗಳು, ಹೊಳಲ್ಕೆರೆ ತಾಲೂಕಿಗೆ ಭದ್ರಾ ನೀರಾವರಿ ಯೋಜನೆಯಲ್ಲಿ ಕೆರೆ ತುಂಬಿಸುವ ಕಾಮಗಾರಿ ಹೀಗೆ ಸಾವಿರಾರು ಕೋಟಿ ಅನುದಾನವನ್ನು ತಂದು ಹೊಳಲ್ಕೆರೆಯನ್ನು ಅಭಿವೃದ್ಧಿಪಡಿಸಿದ್ದು ಮಾಜಿ ಸಚಿವ ಹೆಚ್.ಆಂಜನೇಯ.

ಶಾಸಕ ಎಂ ಚಂದ್ರಪ್ಪ 100 ತರುವಂತ ಶಕ್ತಿ ಇಲ್ಲ, ಮಾಜಿ ಸಚಿವ ಹೆಚ್.ಆಂಜನೇಯರನ್ನು ಆಯ್ಕೆ ಮಾಡಿದ್ದರೇ, ಕಾಂಗ್ರೆಸ್ ಪಕ್ಷದ ಪ್ರಭಲ ಸಚಿವರಾಗಿ ರಾಜ್ಯದಲ್ಲಿ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡುತ್ತಿದ್ದರು. ಹಾಗಾಗಿ ಹೊಳಲ್ಕೆರೆ ಕ್ಷೇತ್ರ ಅಭಿವೃದ್ಧಿ ಇಲ್ಲದೆ ಇನ್ನೂ20 ವರ್ಷಗಳ ಹಿಂದಕ್ಕೆ ಹೋಗುತ್ತಿದೆ ಎಂದು ತಿಳಿಸಿದರು.

ಮಾಜಿ ಸಂಸದ ಬಿ.ಎನ್.ಚಂದ್ರಪ್ಪ, ಬ್ಲಾಕ್ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಹನುಮಂತಪ್ಪ, ಪ್ರಕಾಶ್, ಗ್ಯಾರಂಟಿ ಸಮಿತಿ ಅಧ್ಯಕ್ಷ ಶಿವಣ್ಣ, ಜಿಲ್ಲಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ತಾಜ್ ಪೀರ್, ನಗರಾಧ್ಯಕ್ಷ ಮಜರ್ ಹುಲ್ಲ ಖಾನ್, ಪುರಸಭೆ ನಾಮ ನಿರ್ದೇಶನ ಸದಸ್ಯರಾದ ಮಂಜುನಾಥ್, ಕರಿಯಪ್ಪ, ಪುರಸಭೆ ಸಭೆ ಮಾಜಿ ಸದಸ್ಯರಾದ ಮನ್ಸೂರ್, ಸಜೀಲ್, ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ರುದ್ರಪ್ಪ, ಮಾಜಿ ಅಧ್ಯಕ್ಷ ಕೆ.ಎಂ.ಶಿವಕುಮಾರ್, ಗ್ಯಾರಂಟಿ ಸದಸ್ಯರಾದ ಪಾಡಿಗಟ್ಟೆ ಸುರೇಶ್, ಕಿರಣ್, ಪುಟ್ಟಣ್ಣ, ಜಿ.ಪಂ.ಮಾಜಿ ಸದಸ್ಯರಾದ ಲೋಹಿತ್ ಕುಮಾರ್, ಶಿವಮೂರ್ತಿ, ಎಸ್.ಜೆ. ರಂಗಸ್ವಾಮಿ, ಕಾಂಗ್ರೆಸ್ ಪಕ್ಷದ ರಾಜ್ಯದ ಕಾರ್ಯದರ್ಶಿ ಮಧು ಪಾಲೇಗೌಡ, ತಾ.ಕಾರ್ಯದರ್ಶಿ ಚೇತನ, ಹಾಗೂ ತಾಲ್ಲೂಕಿನ ವಿವಿಧ ಹಳ್ಳಿಯಿಂದ ಸಾವಿರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಪಾದಯಾತ್ರೆಯಲ್ಲಿ ವಿವಿಧ ರೀತಿಯ ಜಾನಪದ ಕಲಾ ಮೇಲೆಗಳು ಪಾಲ್ಗೊಂಡಿದ್ದರು ಕಾರ್ಯಕರ್ತರು ಕಲಾವಿದರನ್ನು ಅದಕ್ಕೆ ಹೆಜ್ಜೆ ಹಾಕುವ ಮೂಲಕ ಮನರಂಜನೆ ನೀಡಿದರು.

# ಯಲ್ಲಪ್ಪನಪಾಳ್ಯ ಹಾಲು ಡೇರಿಗೆ ಮಂಜುನಾಥ್ ಅಧ್ಯಕ್ಷ



ಯಶವಂತಪುರ: ಕ್ಷೇತ್ರದ ಚೋಳನಾಯಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯಲ್ಲಪ್ಪನಪಾಳ್ಯ ಡೇರಿಗೆ ನೂತನ ಅಧ್ಯಕ್ಷರಾಗಿ ಮಂಜುನಾಥ್ ಎಂ. ಸತತ 3 ನೇ ಬಾರಿಗೆ ಹಾಗೂ ಉಪಾಧ್ಯಕ್ಷರಾಗಿ ನಾಗರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ನಿಗದಿಯಾಗಿದ್ದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮಂಜುನಾಥ್ ಎಂ. ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ನಾಗರಾಜು ಹೊರತುಪಡಿಸಿ ಬೇರೆ ಯಾರೂ ಉಮೇದುವಾರಿಕೆ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಲೋಕೇಶ್ ಇಬ್ಬರ ಅವಿರೋಧ ಆಯ್ಕೆಯನ್ನು ಅಧಿಕೃತವಾಗಿ ಘೋಷಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ನೂತನ ಅಧ್ಯಕ್ಷ ಮಂಜುನಾಥ್ ಎಂ. ಹೈನುಗಾರಿಕೆಯನ್ನು ಉತ್ತೇಜಿಸಿ ಹಾಲಿನ ಉತ್ಪಾದನೆ ಹೆಚ್ಚಳಕ್ಕೆ ಆದ್ಯತೆ ನೀಡಲಾಗುವುದು. ಜತೆಗೆ ಉತ್ಪಾದಕರಿಗೆ ಬಮೂಲ್, ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ತಲುಪಿಸಿ, ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.







Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.